ಅಧ್ಯಕ್ಷರು.—ಮಾನ್ಯ ಸದಸ್ಯರಾದ ಪೆರಿಕಲ್ ಮಲ್ಲಪ್ಪನವರ ಕೊನೆಯ ಪ್ರಶ್ನೆ ಏನೆಂದರೆ ಹಿಂದಿನ ಆಹಾರ ಮಂತ್ರಿಗಳು ಎಂ. ಎಲ್. ಎ. ಗಳು ಲೆಟರ್ ಕೊಟ್ಟರೆ ರೇಷನ್ ಕಾರ್ಡ್ ಫಾರಂಗಳನ್ನು ಇಷ್ಯೂ ಮಾಡಬೇಡಿ ಎಂದು ಹೇಳಿದ್ದರು, ಅದು ಇಷ್ಯೂ ಆಸ್ತಿತ್ವದಲ್ಲಿದೆಯೇ ಎಂದು ಕೇಳುತ್ತಿದ್ದಾರೆ ಅಥವಾ ಅದನ್ನೆನಾದರೂ ವಾಪಸ್ ತೆಗೆದುಕೊಂಡಿದ್ದಾರೋ ಹೇಗೆ ಎಂದು ಕೇಳುತ್ತಿದ್ದಾರೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಫಾರಂಗಳನ್ನು ಇಷ್ಯೂ ಮಾಡುವುದಕ್ಕೆ ಏನು ತೊಂದರೆ ಇದೆ ?

(ಗೊಂದಲ)

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪೆರಿಕಲ್ ಮಲ್ಲಪ್ಪನವರು ನನ್ನ ಕೊಠಡಿಗೆ ಬಂದರೆ ನಾನು ನನ್ನ ಅಧಿಕಾರಿಗಳನ್ನು ಕರೆಸಿ ವಿಚಾರಿಸುತ್ತೇನೆ ಅವರು ಪಾಹಿತಿಗಳನ್ನೇನಾದರೂ ಕೊಟ್ಟಿದ್ದು ಕಾರ್ಡುಗಳನ್ನು ಕೊಟ್ಟಿಲ್ಲ ಎಂದು ಹೇಳಿದರೆ ಲೋಪ ವಾಗುತ್ತದೆ. ಪಾಹಿತಿಗಳನ್ನು ಕೊಡದಿದ್ದರೆ ಕಾರ್ಡುಗಳನ್ನು ಕೊಡುವುದಕ್ಕಾಗುವುದಿಲ್ಲ. ಮಾಹಿತಿ ಗಳನ್ನು ಕೊಟ್ಟು ಅಧಿಕಾರಿಗಳೇನಾದರೂ ಕಾರ್ಡುಗಳನ್ನು ಕೊಡದಿದ್ದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ನರಸಿಂಹಮೂರ್ತಿಯವರು ಆಹಾರ ಮಂತ್ರಿಗಳಾದ ಮೇಲೆ ಈಗ ಊಟ ಮಾಡದಿದ್ದರೂ ಕೂಡಾ ಹೊಟ್ಟೆ ತುಂಬಿದಂತಾಗುತ್ತದೆ.

ಅಧ್ಯಕ್ಷರು.—ತಾವೆಲ್ಲರೂ ಇವರ ಕೊಠಡಿಗೆ ಹೋಗಿ ಮಾತನಾಡಿ.

ಕುಟುಂಬ ಕಲ್ಯಾಣ ಯೋಜನೆ ಬಗ್ಗೆ

೨೩೧ ಶ್ರೀ ಎಂ. ನಾರಾಯಣಸ್ವಾಮಿ. (ಬೇತಮಂಗಲ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ೧೯೯೦ನೇ ಜನವರಿಯಿಂದ ಇಲ್ಲಿಯವರೆಗೆ ಕುಟುಂಬ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಎಷ್ಟು ಜನರಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಜಿಲ್ಲಾವಾರು ಮಾಹಿತಿ ನೀಡುವುದು ?

ಆ) ಇವರುಗಳಲ್ಲಿ ಪುರುಷರು ಹಾಗೂ ಮಹಿಳೆಯರ ಸಂಖ್ಯೆ ಎಷ್ಟು ?

ಇ) ಇದಕ್ಕೆ ತಗುಲಿದ ವೆಚ್ಚವೆಷ್ಟು ?

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—

ಅ) ೧೯೯೦ನೇ ಜನವರಿಯಿಂದ ಅಕ್ಟೋಬರ್ ಅಂತ್ಯದ ವರೆಗೆ ೨,೩೧,೨೮೪ ಜನರಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಲಗತ್ತಿಸಲಾಗಿದೆ.

ಆ) ಇವರುಗಳಲ್ಲಿ ೧೧೯೮ ಪುರುಷರು ಮತ್ತು ೨,೩೦,೦೮೬ ಮಹಿಳೆಯರಿದ್ದಾರೆ.

ಇ) ೧೯೯೦ನೇ ಜನವರಿಯಿಂದ ಈವರೆಗೆ ಮಾಡಲಾದ ವೆಚ್ಚ ಅಂದಾಜು ೪೭೧.೯೧ ಲಕ್ಷ ರೂ. ಗಳು.

ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಜನವರಿ ೧೯೯೦ ರಿಂದ ಆಕ್ಟೋಬರ್ ೧೯೯೦ರ ವರೆಗೆ ರಾಜ್ಯದಲ್ಲಿ ನಡೆಸಲಾದ ವಿಧಾನವಾರು ಶಸ್ತ್ರ ಚಿಕಿತ್ಸೆ.

	ಶಸ್ತ್ರ ಚಿಕಿತ್ಸೆ ಒಟ್ಟು	ಮಹಿಳಾ	ಪುರುಷ
೧ (ಎ) ಬೆಂಗಳೂರು ನಗರ ಸಭೆ	೧೭೬೪೧	೧೭೪೭೧	೭೦
೧ (ಬಿ) ಬೆಂಗಳೂರು (ನ) ಪ್ರಾ ಆಕೀಂ	೬೯೬೨	೬೯೩೧	೩೧
೧) ಬೆಂಗಳೂರು ನಗರ ಒಟ್ಟು	೨೪೬೦೩	೨೪೪೦೨	೧೦೧
೨) ಬೆಂಗಳೂರು ಗ್ರಾಮಾಂತರ	೭೨೮೮	೭೨೮೨	೬
೩) ಚಿತ್ರದುರ್ಗ	೧೧೨೪೩	೧೧೨೨೬	೧೭
೪) ಕೋಲಾರ	೯೮೦೯	೯೮೦೦	೯
೫) ಶಿವಮೊಗ್ಗ	೧೨೬೭೧	೧೨೩೩೨	೨೯
೬) ತುಮಕೂರು	೯೮೯೫	೯೮೫೧	೪೪
ಬೆಂಗಳೂರು ವಿಭಾಗ-ಒಟ್ಟು,	೬೫೧೯೯	೬೪೮೪೩	೨೦೬
೭) ಬೆಳಗ್ಗಾಂ	೧೪೮೫೧	೧೪೮೨೧	೩೦
೮) ಬಿಜಾಪುರ	೧೫೫೯೯	೧೫೪೪೪	೧೧೫
೯) ಧಾರವಾಡ	೧೯೮೧೭	೧೯೭೪೫	೭೨
೧೦) ಉತ್ತರಕನ್ನಡ	೪೯೯೧	೪೯೧೮	೨೩
ಬೆಳಗಾಂ ವಿಭಾಗ—ಒಟ್ಟು	೫೯೨೦೮	೫೮೯೬೮	೨೪೦
೧೧) ಬಳ್ಳಾರಿ	೮೯೫೯	೮೮೯೯	೭೦
೧೨) ಬೀದರ್	೬೫೧೨	೬೫೦೪	೮
೧೩) ಗುಲ್ಬರ್ಗ	೮೧೨೭	೮೦೭೨	೫೫
೧೪) ರಾಯಚೂರು	೬೯೦೩	೬೮೭೯	೨೪
ಗುಲ್ಬರ್ಗ ವಿಭಾಗ—ಒಟ್ಟು	೩೦೫೦೧	೩೦೩೫೪	೧೪೭
೧೫) ಚಿಕ್ಕಮಗಳೂರು	೬೯೦೨	೬೮೯೪	೮
೧೬) ದಕ್ಷಿಣಕನ್ನಡ	೧೨೯೮೨	೧೨೪೮೩	೪೯೯
೧೭) ಹಾಸನ	೧೧೧೫೫	೧೧೧೨೫	೩೦
೧೮) ಕೊಡಗು	೨೬೬೩	೨೬೫೪	೯
೧೯) ಮಂಡ್ಯ	೧೦೧೨೨	೧೦೧೧೮	೪
೨೦) ಮೈಸೂರು	೨೨೫೧೨	೨೨೪೯೭	೫೫
ಮೈಸೂರು ವಿಭಾಗ—ಒಟ್ಟು	೬೯೩೭೬	೬೯೨೭೦	೬೦೫
ರಾಜ್ಯದ ಮೊತ್ತ	೨೩೧೪೮೪	೨೩೦೦೫೬	೧೧೯೮

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಅಧ್ಯಕ್ಷರೇ, ೧೯೯೦ನೇ ಜನವರಿಯಿಂದ ಆಕ್ಟೋಬರ್ ಅಂತ್ಯದವರೆಗೆ ೨೩೧,೨೪೪ ಜನರಿಗೆ ಸಂತಾನ ಹರಣ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿದೆ ಎಂದು ಸಚಿವರು ತಮ್ಮ ಉತ್ತರದಲ್ಲಿ ಹೇಳಿತ್ತಾರೆ. ಆದರೆ ಪುರುಷರ ಸಂಖ್ಯೆ ಕೇವಲ ೧೧೯೮ ಆಗಿದೆ ಇದಕ್ಕೆ ಕಾರಣವೇನು? ಮತ್ತು ಇದು ಇಷ್ಟೊಂದು ಕಡಿಮೆಯಾಗಿರುವುದಕ್ಕೆ ಕಾರಣವೇನು? ಇದನ್ನು ಹೋನವರ್ಷಕ್ಕೆ ಹೋಲಿಕೆ ಮಾಡಿದಾಗ ಈ ವರ್ಷದಲ್ಲಿ ಈ ಸಂತಾನಹರಣ ಶಸ್ತ್ರಚಿಕಿತೆ ಅತಿ ಕಡಿಮೆಯಾಗಿದೆ, ಇದಕ್ಕೆ ಏನು ಕಾರಣ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು).—ನಾನು ಇಷ್ಟು ಹೊತ್ತಿನವರೆಗೆ ಸಂಖ್ಯೆ ಏತಕ್ಕೆ ಕಡಿಮೆ ಆಯಿತು ಎಂಬ ಬಗ್ಗೆ ಕಾರಣವನ್ನು ಹೇಳಿದ್ದೇನೆ. ಆದರೆ ತಾವು ಬರೀ ಪುರುಷರ ಶಸ್ತ್ರಚಿಕಿತ್ಸೆ ಕಡಿಮೆ ಆಗಿದೆ ಎಂದು ಪ್ರಶ್ನೆ ಕೇಳಿದಿರಲ್ಲ ಆ ಬಗ್ಗೆ ಹೇಳಿ

ಬೇಕೆಂದರೆ ಹೆಣ್ಣು ಮಕ್ಕಳು ಸುಲಭವಾಗಿ ಸಿಕ್ಕುತ್ತಾರೆ ಎಂದು ಚಿಕಿತ್ಸೆ ಮಾಡಿಸಿಕೊಳ್ಳಲು ಅವರನ್ನು ತಳ್ಳಿ ಬಿಡುತ್ತಾರೆ. ಇದು ಪುರುಷ ಪ್ರಧಾನವಾದ ದೇಶ. ಆದ್ದರಿಂದ ಪುರುಷರು ನೀವು ಸಂತಾನ ಹರಣ ಚಿಕಿತ್ಸೆ ಮಾಡಿಸಿಕೊಳ್ಳಿ ಎಂದು ಹೆಂಗಸರನ್ನು ಕಳಿಸುತ್ತಾರೆ. ಇದರ ಮಾಹಿತಿಯನ್ನು ನೋಡಿದರೆ ತಮಗೆ ಚಿನ್ನಾಗಿ ಗೊತ್ತಾಗುತ್ತದೆ. ವ್ಯಾಸೆಕ್ಟಮಿ ಬಹಳ ಸುಲಭ ಮತ್ತು ಖರ್ಚು ಸಹ ಕಡಿಮೆ. ಆದ್ದರಿಂದ ಪುರುಷರೆಲ್ಲಾ ಇದನ್ನು ಮಾಡಿಸಿಕೊಂಡರೆ ಬಹಳ ಸೌಖ್ಯ. ಹೆಣ್ಣು ಮಕ್ಕಳನ್ನು ಇದರ ಕಷ್ಟದಿಂದ ತಪ್ಪಿಸುತ್ತೀರಾ ಎಂದು ಹೇಳುತ್ತೇನೆ. ಹೆಣ್ಣುಮಕ್ಕಳಿಗೆ ಆದರೆ ಟ್ಯೂಬೆಕ್ಟಮಿ ಮಾಡಬೇಕು ಇಲ್ಲದಿದ್ದರೆ ಲೆಪ್ರೋಸ್ಕೋಪಿಕ್ ಆಪರೇಷನ್ ಮಾಡಬೇಕು, ಇದೆಲ್ಲಕ್ಕಿಂತ ಸುಲಭವಾದುದು ವ್ಯಾಸೆಕ್ಟಮಿಯನ್ನು ಮಾಡುವುದು. ದಯಮಾಡಿ ತಾವೆಲ್ಲಾ ಜಾಹೀರಾತು ಮಾಡಿದರೆ ಪುರುಷರಿಗೆ ಸರಿಯಾದ ಆಪರೇಷನ್ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಶಾಸಕರುಗಳು ಇದರಲ್ಲಿ ಎಷ್ಟು ಭಾಗಿ ಆಗಿದ್ದಾರೆ. ಶಾಸಕರುಗಳು ಹಾಗೂ ಮಂತ್ರಿಗಳಲ್ಲಿ ಎಷ್ಟು ಜನ ಈ ಚಿಕಿತ್ಸೆಯಲ್ಲಿ ಭಾಗಿಗಳಾಗಿದ್ದಾರೆ ಎಂಬ ಬಗ್ಗೆ ಅಂಕಿ ಸಂಖ್ಯೆಗಳು ಇದ್ದರೆ ಕೊಡಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ನಾಗರಾಜ್ ಅವರಿಂದಲೇ ಪ್ರಾರಂಭ ಆಗಲಿ.

ಶ್ರೀ ವಾಟಾಳ್ ನಾಗರಾಜ್.—ನನಗೆ ಎರಡೇ ಮಕ್ಕಳು, ಒಂದು ಗಂಡು. ಒಂದು ಹೆಣ್ಣು. ಇನ್ನು ಬೇಡವೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಎಂ. ನಾರಾಯಣಸ್ವಾಮಿ.—ಮಾನ್ಯ ಸಭಾಧ್ಯಕ್ಷರೇ. ಮಾನ್ಯ ಸಚಿವರು ಹೇಳಿರತಕ್ಕಂಥ ನಿಜವಾದ ಕಾರಣವಲ್ಲವೆಂದು ನನ್ನ ಅಭಿಪ್ರಾಯ. ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಾಗ ಅಲ್ಲಿರತಕ್ಕಂಥ ಡಾಕ್ಟರ್‌ಗಳು, ಅಸಿಸ್ಟೆಂಟ್ ಸರ್ಜನ್‌ಗಳು ಹಾಗೂ ಎಎನ್‌ಎಂಸ್‌ಗಳು ಹೆಣ್ಣು ಮಕ್ಕಳಿಗೆ ಇಲ್ಲದ್ದನ್ನು ಪ್ರಚೋದನೆ ಮಾಡಿ ಆಪರೇಷನ್‌ಗೆ ಕರೆದುಕೊಂಡು ಬರುತ್ತಾರೋ ಆಪರೇಷನ್ ಆದ ಮೇಲೆ ಆಕೆಯ ಗತಿ ಏನು? ಆಕೆ ಹೇಗಿದ್ದಾಳೆ ಎಂಬ ಬಗ್ಗೆ ಏನೂ ನೋಡದೇ ಒಂದರ ಬೇಜವಾಬ್ದಾರಿಯಿಂದ ವರ್ತಿಸತಕ್ಕ ಅಧಿಕಾರ ವರ್ಗ ಇದೆ. ಜೊತೆಗೆ ಅವರು ಏನು ಹೇಳುತ್ತಾರೆ ಎಂದರೆ ಮೂರು ತಿಂಗಳಿಗೆ, ನಾಲ್ಕು ತಿಂಗಳು ನಾವು ಟ್ರೀಟ್‌ಮೆಂಟ್ ಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿರುತ್ತಾರೆ. ಆಪರೇಷನ್ ಆದ ಮೇಲೆ.....

ಅಧ್ಯಕ್ಷರು.—ಕ್ವಿಶ್ಚನ್ ಕೇಳಿ...

ಶ್ರೀ ಎಂ. ನಾರಾಯಣಸ್ವಾಮಿ.—ಆದ್ದರಿಂದ ಇಂತಹ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಇದಕ್ಕೆ ಇನ್ನೂ ಒಂದು ಕಾರಣ ಇದೆ...

ಅಧ್ಯಕ್ಷರು.—ನೀವು ಕಾರಣ ಹೇಳಬೇಕಾಗಿಲ್ಲ. ಪ್ರಶ್ನೆ ಇದ್ದರೆ ಕೇಳಿ. ಇಲ್ಲದಿದ್ದರೆ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ.—ಇಂಥಹ ನಿರ್ಲಕ್ಷ್ಯ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೆಣ್ಣು ಮಕ್ಕಳಿಗೆ ಆಪರೇಷನ್ ಆದ ಮೇಲೆ ನಿರ್ಲಕ್ಷ್ಯವಾಗಿ ಟ್ರೀಟ್‌ಮೆಂಟ್ ಮಾಡುತ್ತಾರೆ ಎಂದರೆ ಇಷ್ಟು ಆಪರೇಷನ್‌ಗಳು ಆಗುತ್ತಲೇ ಇರಲಿಲ್ಲ. ಇಲ್ಲಿ ಆಪರೇಷನ್‌ಗಳು ಆ ರೀತಿಯಿಂದ ಗೊತ್ತಾಗುತ್ತದೆ. ನಿಮಗೆ ಆಪರೇಷನ್‌ಗಳ ಮಾಹಿತಿ ಇಲ್ಲವೆಂದು ಕಾಣುತ್ತದೆ. ಮೂರು ತಿಂಗಳು ಅಥವಾ ನಾಲ್ಕು ತಿಂಗಳುಗಳ ಕಾಲ ಯಾವ ಶುಶ್ರೂಷೆಯೂ ಬೇಕಾಗಿಲ್ಲ ಲೆಪ್ರೋಸ್ಕೋಪಿಕ್ ಆಪರೇಷನ್ ಮಾಡಿ ೪-೫ ಗಂಟೆಗಳೊಳಗೆ ಅವರನ್ನು ನಡೆಸಿ ತಿರುಗಿ ಅವರನ್ನು ಮನೆಗೆ ಕಳಿಸುತ್ತಾರೆ. ಇಂತಹ ಸೂಕ್ಷ್ಮವಾದ ಆಪರೇಷನ್‌ಗಳು ಬಂದಿವೆ. ತಾವು ಹೇಳಿದ ಹಾಗೆ ಅವರಿಗೆ ನಿರ್ಲಕ್ಷ್ಯವೂ ಇಲ್ಲ ಮತ್ತು ಅವರಿಗೆ ಯಾವುದೇ ತರಹ ಶಿಕ್ಷೆಯನ್ನು ಕೊಡಬೇಕಾದ ಅವಶ್ಯಕತೆ ಸಹ ಇಲ್ಲ.

ಬೀದರ್ ಜಿಲ್ಲೆಯಲ್ಲಿ ತೆರೆಯಲಾಗಿರುವ ನ್ಯಾಯ ಬೆಲೆ ಅಂಗಡಿಗಳ ಬಗ್ಗೆ

೩೨೧. ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೀದರ್ ಜಿಲ್ಲೆಯಲ್ಲಿ ತೆರೆಯಲಾಗಿರುವ ಒಟ್ಟು ಪಡಿತರ ಅಂಗಡಿಗಳ ಸಂಖ್ಯೆ ಎಷ್ಟು ?